ಕರ್ನಾಟಕ ವಿಧಾನಸಭೆ

ಸೋಮವಾರ 16ನೆ ಮಾರ್ಚಿ1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-30 ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ)ಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರಗಳು.....

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ. ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ವಚನ ಭಂಗ ಮಾಡಿದ್ದಾರೆ....

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಲಿ ಆಮೇಲೆ ನಾನು ನಿಮಗೆ ಅವಕಾಶ ಮಾಡಿ ಕೊಡುತ್ತೇನೆ....

(ಗೊಂದಲ)ತ್ತೀ

ಶ್ರೀ ಕೆ.ಎಸ್. ಈಶ್ವರಪ್ಪ : ಪ್ರಶ್ನೋತ್ತರ ಬೇಡ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ. ಮಾನ್ಯ ಮುಖ್ಯಮಂತ್ರಿಗಳು ವಚನ ಭಂಗ ಮಾಡಿದ್ದಾರೆ.....

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಲಿ....

(ಗೊಂದಲ)

ಉಪಾಧ್ಯಕ್ಷರು : ತಾವು ನನ್ನ ಅನುಮತಿ ಪಡೆದು ಮಾತನಾಡಬೆಕು. ನಾನು ತಮಗೆ ಅನುಮತಿ ಕೊಟ್ಟಿಲ್ಲ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯಮುಖ್ಯಮಂತ್ರಿಗಳು ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿದ್ದರು....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ವಚನ ಭಂಗ ಮಾಡಿರುವುದರಿಂದ ಅದು ತನಿಖೆ ಆಗಬೇಕು ...

ಉಪಾಧ್ಯಕ್ಷರು : ನಾನು ನಿಮಗೆ ಅನುಮತಿ ಕೊಟ್ಟಿಲ್ಲ, ನೀವು ಏನು ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

(ಉಪಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಉಪಾಧ್ಯಕ್ಷರು : ನಾನು ನಿಮಗೆ ಪರ್ಮಿಶನ್ ಕೊಟ್ಟಿಲ್ಲ. ಪ್ರಶ್ನೋತ್ತರ ವೇಳೆ ಮುಗಿಯಲಿ. ಮೊದಲು ಆಫೀಷಿಯಲ್ ಬಿಜಿನೆಸ್ ಮುಗಿಯಲಿ. ಶ್ರೀ ಎನ್.ಜಿ. ನಾಯಕ್‌ರವರೆ ತಾವು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷೆಣಿಯವರೆ, ಮಾನ್ಯ ಈಶ್ವರಪ್ಪನವರು ಮಾತನಾಡಿದ್ದುದು ರೆಕಾರ್ಡ್‌ಗೆ ಹೋಗಿದೆಯೇ?

ಉಪಾಧ್ಯಕ್ಷರು : ನಾನು ಅವರಿಗೆ ಅನುಮತಿ ಕೊಟ್ಟಿಲ್ಲ. ಅದು ಯಾವುದೂ ರೆಕಾರ್ಡ್‌ಗೆ ಹೋಗಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷೆಣಿಯವರೆ.

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಲಿ. ಆಮೇಲೆ ನಾನು ನಿಮಗೆ ಅವಕಾಶ ಮಾಡಿ ಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಈಗ ಇಲ್ಲಿ ಲಿಸ್ಟ್ ಆಫ್ ಬಿಸ್‌ನೆಸ್ ಏನು ಹಾಕಿದ್ದೇವೆ, ಅದರ ಪ್ರಕಾರ ಹೋಗೋಣ. ನೀವು ಏನಾದರೂ ಹೇಳುವುದಿದ್ದರೆ ಆಮೇಲೆ ತಮಗೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಈಗ ನಾನು ಕ್ವೊಶ್ಚನ್ ಅವರ್ ಪ್ರಾರಂಭ ಮಾಡಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಏನಾದರೂ ಹೇಳಬೇಕಾದರೆ ಆಮೇಲೆ ಹೇಳಿ. ಕ್ವೊಶ್ಚನ್ ಅವರ್. ಕಾಲಿಂಗ್ ಅಟೆನ್‌ಷನ್ ಆದ ಮೇಲೆ ಜೀರೋ ಅವರ್‌ನಲ್ಲಿ ಹೇಳಬೇಕಾದರೆ ಹೇಳಿ. ಪ್ರಾರಂಭದಲ್ಲೇ ಹೀಗೆ ಮಾಡುವುದು ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು : ಎಸ್.ಜಿ. ನಾಯಕ್‌ರವರೇ ಸಪ್ಲಿಮೆಂಟರಿ ಹಾಕಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಪೆಸಿಫಿಕ್ ಗ್ರಿವೆನ್ಸ್‌ಸ್ ಇದ್ದರೆ ಅದಕ್ಕೆ ಸ್ಪೆಸಿಫಿಕ್ ಫಾರಂ ಇದೆ. ಅದರ ಪ್ರಕಾರ ರೈಸ್ ಮಾಡಬಹುದು.

ಉಪಾಧ್ಯಕ್ಷರು : ಎಲ್ಲದಕ್ಕೂ ಒಂದು ನೀತಿ ನಿಯಮ ಇದೆ.

(ಗೊಂದಲ)

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಶಾಸನ ಸಭೆ ನಡೆಸುವುದಕ್ಕೆ ದಿನಕ್ಕೆ 25 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದನ್ನು ಮುಚ್ಚಿಬಿಡಿ.

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಮೆಂಬರ್ಸ್ ಎಲ್ಲಿದ್ದಾರೆ? ನಿಮ್ಮ ಮುಖಂಡರು ಎಲ್ಲಿದ್ದಾರೆ? ಅವರನ್ನು ಕರೆಸಿ ನಿಮಗೇ ಆಸಕ್ತಿ ಇಲ್ಲ. ಇನ್ನೊಬ್ಬರಿಗೆ ಹೇಳುತ್ತೀರಿ.

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಈಗ ನಾವು ಏನು ಅಜೆಂಡಾ ಹಾಕಿರುತ್ತೇವೆಯೋ ಅದರ ಪ್ರಕಾರ ಹೋಗಬೇಕಾಗುತ್ತದೆ. ನೀವು ಮಾತನಾಡಬೇಕಾದರೆ ನಾನು ಆಮೇಲೆ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತಿದ್ದರೂ ಸಹಾ ತಾವು ಅದನ್ನು ಪಾಲಿಸುತ್ತಿಲ್ಲ. ದಯವಿಟ್ಟು ಸಹಕಾರ ಕೊಡಿ. ನಾನು ಛೇರ್‌ನಲ್ಲಿ ಕುಳಿತು ಸಭೆಯನ್ನು ನಡೆಸಲಿಕ್ಕೆ ತಾವು ಸಹಕಾರ ಕೊಡಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೆನೆ. ದಯವಿಟ್ಟು ಕುಳಿತುಕೊಳ್ಳಿ ಈಗ ಎಸ್.ಜೆ. ನಾಯಕರೇ ಸಪ್ಲಿಮೆಂಟರಿ ಹಾಕಿರಿ.

(ಗೊಂದಲ)

ಉಪಾಧ್ಯಕ್ಷರು : ಈಶ್ವರಪ್ಪನವರೆ. ನೀವು ನಮಗೆ ಸಹಕಾರ ಕೊಡದಿದ್ದರೆ. I here to take the last course ದಯವಿಟ್ಟು ನೀವು ಸಹಕಾರ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ. ತಾವು ಹೀಗೆ ಮಾತನಾಡುವುದು ಸರಿಯಲ್ಲ.....

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರಕಾರವೇ ಹೀಗೆ ನಡೆದುಕೊಳ್ಳುತ್ತಾ ಇದೆ. ಹಾಗಾದರೆ ನಾವುಗಳು ಹೇಗೆ ನಡೆದುಕೊಳ್ಳಬೇಕೆಂದು ಹೇಳಿ. ಇಲ್ಲಿ ವಿರೋಧ ಪಕ್ಷದವರಿಗೆ ಬೆಲೆ ಇಲ್ಲ, ಜನತೆಗೆ ಬೆಲೆ ಇಲ್ಲ, ಇಂಥ ಒಂದು ಸರಕಾರವನ್ನು ಸರಕಾರ ಎಂದು ಕರೆಯುವುದಾದರೂ ಹೇಗೆ? ಇಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಿಗೂ ಬೆಲೆ ಇಲ್ಲ.....

ಉಪಾಧ್ಯಕ್ಷರು : ತಮಗೆ ಮುಂದೆ ಮಾತನಾಡಲು ಅವಕಾಶ ಕೊಡುತ್ತೇನೆ. ಪ್ರಶ್ನೋತ್ತರ ಕಾಲದಲ್ಲಿ ತಾವು ಮಾತನಾಡುವುದು ಸರಿಯಲ್ಲ.....

ಶ್ರೀ ಕೆ.ಎಸ್. ಈಶ್ವರಪ್ಪ : ಈ ಸಭೆಯಲ್ಲಿ ಶಾಸಕರು ಇದ್ದಾರೆಯೇ?

ಉಪಾಧ್ಯಕ್ಷರು : ಈ ಸಭೆ ನಡೆಸಲು ಬೇಕಾದಷ್ಟು ಕೋರಂ ಇದೆ. ನಾವು ಈ ಕಲಾಪಗಳಂತೆ ಪ್ರಶ್ನೋತ್ತರಗಳನ್ನು ಪ್ರಾರಂಭ ಮಾಡಿದ್ದೇವೆ.

(ಗೊಂದಲ)

ಶ್ರೀ ಜೆ. ಪುಟ್ಟಸ್ವಾಮಿಗೌಡ : ಮಾನ್ಯ ಸಭಾಧ್ಯಕ್ಷಣಿಯವರೇ. ಸದನದಲ್ಲಿ ಪ್ರಶ್ನೋತ್ತರ ವೇಳೆ ಪ್ರತಿಯೊಬ್ಬ ಸದಸ್ಯರ ಹಕ್ಕಿನ ಪ್ರಶ್ನೆಯಾಗಿದೆ. ಪ್ರಶ್ನೆಗಳನ್ನು ಕೇಳುವುದು ಸದಸ್ಯರುಗಳ ಹಕ್ಕಿಗೆ ಸಂಬಂಧಪಟ್ಟದ್ದು. ಇಲ್ಲಿರುವ ಪ್ರತಿಯೊಬ್ಬ ಸದಸ್ಯರಿಗೂ ಆ ಒಂದು ಹಕ್ಕು ಇದೆ. ಪ್ರತಿಯೊಬ್ಬರೂ ಈ ಸಭೆಗೆ ಅಧೀನರೇ ಹೊರತು, ಸಭೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಬಾರದು. ಈ ಸಭೆಗಿಂತ ಯಾರೂ ದೊಡ್ಡವರು ಇಲ್ಲ. ಇಂಥ ಪ್ರಶ್ನೋತ್ತರ ಕಾಲದಲ್ಲಿ ಹೀಗೆ ಸದಸ್ಯರ ಹಕ್ಕನ್ನು ಕಿತ್ತುಕೊಳ್ಳತಕ್ಕಂಥ ವ್ಯಕ್ತಿ ಈ ವಿಚಾರದಲ್ಲಿ ಹಸ್ತಕ್ಷೇಪಮಾಡುವುದಾದರೆ ಅದನ್ನು ತಾವು ಖಂಡನೆ ಮಾಡಬೇಕಾಗುತ್ತದೆ. ಅವರು ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ಸದಸ್ಯರ ಹಕ್ಕನ್ನು ಕಿತ್ತುಕೊಂಡ ಹಾಗೆ ಆಗುತ್ತದೆ. ಇದು ಸಲ್ಲದು ಇಂತಹ ಒಂದು ಬ್ಯಾಡ್‌ಪ್ರಿಸಿಡೆಂಟ್ ನಮ್ಮ ಸಭೆಯಲ್ಲಿ ಆಗಬಾರದು ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಎನ್.ಜಿ. ನಾಯಕ್‌ರವರು ತಮ್ಮ ಪ್ರಶ್ನೆಯನ್ನು ಕೇಳಿ.....

ಶ್ರೀ ಕೆ.ಎಸ್. ಈಶ್ವರಪ್ಪ : 1991-92ನೇ ಸಾಲಿನ ಬಜೆಟ್‌ನಲ್ಲಿ ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರೂ ಕೂಡ ಮಾಡಿಲ್ಲ. ಇದು ಸರಕಾರವೇ ಅಲ್ಲ....

(ಗೊಂದಲ)

ಉಪಾಧ್ಯಕ್ಷರು : ತಾವು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗುವುದಿಲ್ಲ.....

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಉಪಾಧ್ಯಕ್ಷಣಿಯವರೆ. ತಾವು ಈಗಾಗಲೇ ಮಾನ್ಯ ಈಶ್ವರಪ್ಪನವರಿಗೆ ಬಹಳ ಸೂಕ್ತವಾಗಿ ಹೇಳಿದ್ದೀರಿ. ನಾನು ನಿಮಗೆ ಅವಕಾಶ ಕೊಡುತ್ತೇನೆ. ಅವಕಾಶವನ್ನು ಕೊಟ್ಟಾಗ ಮಾತನಾಡಿ ಈಗ ಪ್ರಶ್ನೋತ್ತರ ಕಾಲ ಪ್ರಶ್ನೆಗಳನ್ನು ಹಾಕಿದ್ದಾರೆ. ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನೀವು ಇದಕ್ಕೆ ಧಕ್ಕೆ ತರಬೇಡಿ. ಸಹಕಾರ ಕೊಡಿ ಎಂದು ಹೇಳಿದ್ದೀರಿ. ತಾವುಗಳು ಸಹಕಾರ ಕೇಳಿದ್ದು ಸರಿಯಾಗಿದೆ. ಆದರೆ ಅವರ ನಡವಳಿಕೆಯು ಸಹನೆಗೆ ಮಿತಿಮೀರಿ ಹೋಗುತ್ತಾ ಇದೆ. ಮಾನ್ಯ ಪುಟ್ಟಸ್ವಾಮಿಗೌಡರು ಹೇಳಿದ ಹಾಗೆ ಮಾನ್ಯ ಸದಸ್ಯರು ಈ ಸಭೆಗೆ ಅಧೀನರಾಗಿ ಇರುತ್ತಾರೋ ಇಲ್ಲವೇ ಸಭೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಾರೋ ಎಂಬುದು ಬೇಕು. ಈ ಬಗ್ಗೆ ಅವರ ನೀತಿ ಏನು ಎಂದು ತಿಳಿದುಕೊಳ್ಳಬೇಕು. ಅವರು ಸಭೆಗೆ ಗೌರವ ಕೊಟ್ಟು, ತಾವು ಗೌರವವನ್ನು ಸಂಪಾದಿಸಿಕೊಳ್ಳಬೇಕು. ಈ ಸದನಕ್ಕೆ ಅಗೌರವ ಮಾಡಿ. ಸಭೆಯ ಸದಸ್ಯರಿಗೆ ಅಗೌರವಮಾಡಿ ಮಾನ್ಯ ಉಪಾಧ್ಯಕ್ಷಣಿಯವರಿಗೆ ಅಗೌರವ ಮಾಡಿ ಇನ್ನೂ ಹಠಮಾರಿತನವನ್ನು ಮಾಡುತ್ತಾರೆ ಅಂದರೆ, ನಮ್ಮ ಸಹನೆಯೂ ಮಿತಿಮೀರಿ ಹೋಗುತ್ತಾ ಇದೆ. ತಾವು ಸಭೆಯ ನಿಯಮಾವಳಿಗಳ ಪ್ರಕಾರ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದೊಂದೇ ಬಾಕಿ ಇರುವುದು ಎಂದು ನಾನು ಭಾವಿಸಿದ್ದೇನೆ. ಆದಕ್ಕೆ ಮಾನ್ಯ ಸದಸ್ಯರು ಅವಕಾಶ ಮಾಡಿಕೊಡಬಾರದು ಎಂದು ಕೂಡ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ನಡೆದಂಥ ವಿಚಾರಗಳ ಪ್ರಕಾರ ಸರಕಾರದವರು ನಡೆದುಕೊಂಡಿಲ್ಲ. ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುತ್ತಿಲ್ಲ. ಇದು ಸರಕಾರವೇ ಅಲ್ಲ....

(ಗೊಂದಲ)

ಉಪಾಧ್ಯಕ್ಷರು : ಈಗ ಸಭೆ ನಡೆಸುವುದಕ್ಕೆ ತಾವು ಸಹಕಾರ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮಾನ್ಯ ಸಚಿವರು ಹೇಳಿದ ಹಾಗೆ. ಪ್ರಶ್ನೋತ್ತರ ವೇಳೆಯು ಬಹಳ ಮುಖ್ಯವಾದ ಕಾಲ ಇದು ಇಡೀ ರಾಜ್ಯದ ಪ್ರಶ್ನೆ. ಪ್ರತಿಯೊಬ್ಬ ಶಾಸಕರೂ ತಮ್ಮ ತಮ್ಮ ಕ್ಷೇತ್ರದ ವಿಷಯಗಳ ಬಗ್ಗೆ. ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಗೆ ತರುತ್ತಾರೆ. ತಾವುಗಳು ಅದಕ್ಕೆ ಅಡ್ಡಿ ಮಾಡುವುದು ಸರಿಯಲ್ಲ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅಫಿಷಿಯಲ್ ಬಿಸಿನೆಸ್ ಆದಮೇಲೆ ತಮಗೆ ಅವಕಾಶವನ್ನು ಮಾಡಿಕೊಡುತ್ತೇನೆಂದು ಮತ್ತೊಮ್ಮೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ದಯವಿಟ್ಟು ತಾವು ಸಹಕಾರ ಕೊಡಬೇಕು. ಹೀಗೆ ಮಾತನಾಡುವುದು ಸರಿಯಲ್ಲ.... ಈಗ ನಾನು ಎನ್.ಜಿ. ನಾಯಕ್‌ರನ್ನು ಕರೆದಿದ್ದೇನೆ. ಅವರು ಸಪ್ಲಿಮೆಂಟರಿ ಪ್ರಶ್ನೆ ಕೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಹೀಗೆ ಅವರು ಪ್ರಶ್ನೆಗಳಿಗೆ ಉತ್ತರ ಕೊಟ್ಟರೂ ಅದಕ್ಕೆ ಬೆಲೆ ಇದಯೇ? ಸರಕಾರದವರು ಕೊಟ್ಟ ಆಶ್ವಾಸನೆಗಳು ಈಡೇರುತ್ತಾ ಇವೆಯೇ?

ಉಪಾಧ್ಯಕ್ಷರು : ರೂಲ್ 330ರ ಪ್ರಕಾರ ತಾವು ನನಗೆ ಸಹಕಾರ ಕೊಡಿ ಎಂದು ಕೇಳುತ್ತಾ ಇದ್ದೇನೆ. ಆದರೂ ತಾವುಗಳು ನನಗೆ ಇಲ್ಲಿ ಕಾರ್ಯಕಲಾಪಗಳನ್ನು ನಡೆಸಲು ಅಡ್ಡಿ ಬರುತ್ತಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ಆದ್ದರಿಂದ ದಯವಿಟ್ಟು ತಾವು ಈ ಸದನದಿಂದ ವಿತ್‌ಡ್ರಾ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಮಾತಿಗೆ ನಾನು ಗೌರವ ಕೊಡುತ್ತೇನೆ. ಆದರೆ ಈ ಸರ್ಕಾರ ಸಭಾಧ್ಯಕ್ಷರ ಮಾತಿಗೆ ಗೌರವ ಕೊಟ್ಟಿಲ್ಲ. ವಚನಭಂಗ ಮಾಡಿದೆ. ಸಾಲ ಮನ್ನಾ ಮಾಡಿಲ್ಲ.

MADAM DEPUTY SPEAKER : I want you to withdraw from the House ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಆಯಿತು. ಅಧ್ಯಕ್ಷಿಣಿಯವರೆ. ನಿಮ್ಮ ಮಾತಿಗೆ ಗೌರವ ಕೊಟ್ಟು ಸಭೆಯಿಂದ ಹೊರಗೆಡೆ ಹೋಗುತ್ತಿದ್ದೇನೆ. ಈ ರಾಜ್ಯದ ಯುವಜನರಿಗೆ ಉದ್ಯೋಗ ಕೊಡಲು ಸರ್ಕಾರ ಸಂಪೂರ್ಣ ವಿಫಲವಾಗಿದೆ. ಗ್ರಾನೈಟ್‌ನಲ್ಲಿ ಅನ್ಯಾಯವಾಗಿದೆಯೆಂದು ಕೋರ್ಟಿನಲ್ಲಿ ತೀರ್ಮಾನವಾಗಿದೆ.

ಉಪಾಧ್ಯಕ್ಷಿಣಿಯವರು : ನೀವು ಅಡ್ಡಿಮಾಡುತ್ತಿದ್ದೀರಿ. ನೀವು ಈ ರೀತಿ ಮಾಡಬಾರದು. I want you to withdraw from the House.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಅಧಿವೇಶನಕ್ಕೇ ಪೂರ್ಣ ಬಹಿಷ್ಕಾರ ಹಾಕುತ್ತೇವೆ.

ಉಪಾಧ್ಯಕ್ಷಿಣಿಯವರು : ಅವರು ಹೋಗುವಾಗ ಮಾತನಾಡಿದ್ದು ಏನೂ ರೆಕಾರ್ಡಿಗೆ ಹೋಗಲಿಕ್ಕೆ ಸಾಧ್ಯವಿಲ್ಲ.

(ಶ್ರೀ ಈಶ್ವರಪ್ಪನವರು ಸಭೆಯಿಂದ ನಿರ್ಗಮಿಸಿದರು)